ಸೆಲೆಬ್ರಿಟಿ ■ ಹನಿ

# ಹತ್ತು ಸಾವಿರದ ಸರದಾರ

‘ಇನ್ನೇನು ಕ್ರಿಸ್ ಗೇಲ್ ಕ್ರಿಕೆಟ್ ಜೀವನದ ಇನಿಂಗ್ಸ್ ಮುಗಿಯಿತು’ ಎಂದು ಎಲ್ಲರೂ ಆಡಿಕೊಳ್ಳುತ್ತಿರುವಂತೆಯೇ ಮತ್ತೊಮ್ಮೆ ಸ್ಫೋಟಕ ಬ್ಯಾಟಿಂಗ್ ಪ್ರದರ್ಶನ ನೀಡಿದ್ದಾರೆ ಗೇಲ್. ಕಳೆದ 9 ಐಪಿಎಲ್ ಪಂದ್ಯಗಳಲ್ಲಿ ಗೇಲ್ ಗಳಿಸಿದ್ದು ಬರೀ 151 ರನ್‌ಗಳಷ್ಟೇ. ಟಿ20 ಪಂದ್ಯಗಳ ಮಟ್ಟಿಗೆ ಇದು ಅರೆಕಾಸಿನ ಮಜ್ಜಿಗೆ! ಆದರೆ ಕಳೆದ ವಾರ ಆರ್‌ಸಿಬಿ ಪರವಾಗಿ ಗುಜರಾತ್ ಲಯನ್ಸ್ ವಿರುದ್ಧ 38 ಎಸೆತಗಳಲ್ಲಿ 77 ರನ್ ಗಳಿಸಿದ ಗೇಲ್, ಅದರಲ್ಲಿ ಸಿಡಿಸಿದ ಏಳೂ ಸಿಕ್ಸರ್‌ಗಳು ಪ್ರೇಕ್ಷಕರನ್ನು ಹುಚ್ಚೆಬ್ಬಿಸಿವೆ. ಜತೆಗೇ ಟಿ20 ಕ್ರಿಕೆಟ್‌ನಲ್ಲಿ ಒಟ್ಟು 10,000 ರನ್‌ಗಳನ್ನು ದಾಟಿದ ಮೊದಲ ಕ್ರಿಕೆಟಿಗ ಎಂಬ ವಿಶ್ವದಾಖಲೆಯೂ ಜತೆಯಾಗಿದೆ. ಟಿ20 ಯಲ್ಲಿ ಒಟ್ಟು 285 ಇನಿಂಗ್ಸ್‌ಗಳಲ್ಲಿ ಗೇಲ್ ಈ ದಾಖಲೆಯನ್ನು ಸಾಧಿಸಿರುವುದು ನಂಬಲಸಾಧ್ಯವಾದ ಸತ್ಯವೇ ಸರಿ. ಹಾಗೆಂದೇ ಪಂದ್ಯ ಮುಗಿದ ಬಳಿಕ ಗೇಲ್ ಸೊಕ್ಕಿನಿಂದ ‘ಯೂನಿವರ್ಸ್ ಬಾಸ್ ಇನ್ನೂ ಬದುಕಿದ್ದಾನೆ’ ಎಂದು ಬ್ಯಾಟ್ ಎತ್ತಿ ಹಿಡಿದು ಹೇಳಿದ್ದು.

ಕ್ರಿಸ್ ಗೇಲ್ ಆಟವೆಂದರೆ ನಂಬಲು ಕಷ್ಟವಾಗುವಂತಹದ್ದೇ. ಕ್ರಿಕೆಟ್ ಆಡುವ ಬಹುತೇಕ ದೇಶಗಳಲ್ಲಿ ಅಪಾರ ಅಭಿಮಾನಿಗಳನ್ನು ದಕ್ಕಿಸಿಕೊಂಡಿರುವ ಗೇಲ್ ಕಳೆದ ಎರಡು ವರ್ಷಗಳಿಂದ ಟೆಸ್ಟ್‌ನಲ್ಲಾಗಲೀ, ಏಕದಿನದ ಪಂದ್ಯಗಳಲ್ಲಾಗಲೂ ಆಡಿಯೇ ಇಲ್ಲ. ಆತನದ್ದೇನಿದ್ದರೂ 20 ಓವರ್‌ಗಳ ಟಿ20 ಪಂದ್ಯಗಳಷ್ಟೇ. ಆದರೆ ಜಗತ್ತಿನ ಯಾವ ಟೆಸ್ಟ್ ಮತ್ತು ಏಕದಿನದ ಪಂದ್ಯಗಳ ಆಟಗಾರನಿಗೂ ಸಿಗದಷ್ಟು ಪ್ರಚಾರ ಮತ್ತು ಹಣ ಗೇಲ್‌ಗೆ ಸಿಗುತ್ತಿದೆ. ಅದಕ್ಕೆ ಕಾರಣ ಆತನ ಅಭಿಮಾನಿಗಳು. ‘ಕ್ರಿಸ್ ಗೇಲ್ ಆಡುತ್ತಿದ್ದಾರೆ’ ಎಂಬ ಏಕೈಕ ಕಾರಣಕ್ಕಾಗಿಯೇ ಸಹಸ್ರಾರು ಜನ ಪಂದ್ಯ ನೋಡಲು ಬರುತ್ತಾರೆ ಎನ್ನುವುದು ಸುಳ್ಳಲ್ಲ. ಅದರಲ್ಲೂ ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ, ಗೇಲ್ ಆಡಿದರೆ ಮಾತ್ರ ಆರ್‌ಸಿಬಿ ತಂಡ ಗೆಲ್ಲಬಹುದು ಎಂಬಂತಹ ಮೂಢನಂಬಿಕೆಯೇ ಬೆಳೆದುಬಿಟ್ಟಿದೆ.

ವಾಣಿಜ್ಯರಂಗದಲ್ಲಿ ಮಲ್ಟಿ ನ್ಯಾಷನಲ್ ಕಂಪೆನಿಗಳಿರುವಂತೆ ಈತ ಎಲ್ಲ ಅರ್ಥಗಳಲ್ಲೂ ಮಲ್ಟಿನ್ಯಾಷನಲ್ ಕ್ರಿಕೆಟಿಗ. ಭಾರತೀಯ ಪ್ರೀಮಿಯರ್ ಲೀಗ್‌ಗೆ (ಐಪಿಎಲ್) ಬಂದರೆ ಈತ ಆರ್‌ಸಿಬಿ ತಂಡದಲ್ಲಿದ್ದು ಬೆಂಗಳೂರಿಗ. ಅದೇ ಪಾಕಿಸ್ತಾನ ಸೂಪರ್ ಲೀಗ್ ನಲ್ಲಿ ಆಟವಾಡಲು ಹೋದರೆ ಈತ ಕರಾಚಿ ಕಿಂಗ್ಸ್‌ನಲ್ಲಿ ಆಟವಾಡುವ ಕರಾಚಿಗ. ಬಾಂಗ್ಲಾ ಪ್ರೀಮಿಯರ್ ಲೀಗ್‌ನಲ್ಲಿ ಈತ ಡಾಕ್ಕಾ ಗ್ಲಾಡಿಯೇಟರ್ ತಂಡದ ನೆಚ್ಚಿನ ಆಟಗಾರ. ಅದೇ ಆಸ್ಟ್ರೇಲಿಯಾದ ಬಿಗ್ ಬ್ಯಾಶ್ ಲೀಗ್‌ನಲ್ಲಿ ಈತ ಮೆಲ್ಬೋರ್ನ್ ರೆನೆಗೇಡ್ಸ್‌ನ ಪ್ರಮುಖ ಆಟಗಾರ. ವಾರ್ಸೆಸ್ಟರ್‌ಶೈರ್, ದಿ ವೆಸ್ಟರ್ನ್ ವಾರಿಯರ್ಸ್, ಸಿಡ್ನಿ ಥಂಡರ್, ಬರಿಸಾಲ್ ಬರ್ನರ್ಸ್, ಸಾಮರ್ಸೆಟ್, ಶ್ರೀಲಂಕಾದ ಉವಾ ನೆಕ್ಸ್ಟ್, ಕೋಲ್ಕತ್ತಾದ ಕೆಕೆಆರ್– ಹೀಗೆ ಈತ ಆಟವಾಡಿದ ತಂಡಗಳು ಹತ್ತಾರು.



‘ದಾಖಲೆಗಳು ಇರುವುದೇ ಮುರಿಯುವುದಕ್ಕೆ’ ಎನ್ನುವುದು ಹಳೆಯ ಮಾತು. ಕ್ರಿಸ್ ಗೇಲ್ ಸಿದ್ಧಾಂತ ‘ದಾಖಲೆಗಳು ಇರುವುದೇ ಸೃಷ್ಟಿಸುವುದಕ್ಕೆ’ ಎನ್ನುವಂತಿದೆ! ಈತನ ಹೆಸರಲ್ಲಿ ಎಷ್ಟೊಂದು ದಾಖಲೆಗಳಿವೆ! ಟೆಸ್ಟ್ ಪಂದ್ಯದಲ್ಲಿ ತ್ರಿಶತಕ, ಏಕದಿನ ಪಂದ್ಯದಲ್ಲಿ ದ್ವಿಶತಕ ಮತ್ತು ಟಿ20 ಪಂದ್ಯದಲ್ಲಿ ಶತಕ ಹೊಡೆದಿರುವ ವಿಶ್ವದ ಏಕೈಕ ಆಟಗಾರನೀತ. ಟೆಸ್ಟ್ ಪಂದ್ಯದ ಮೊದಲ ಬಾಲ್‌ನಲ್ಲೇ ಸಿಕ್ಸರ್ ಹೊಡೆದ ವಿಶ್ವದ ಏಕೈಕ ಬ್ಯಾಟ್ಸ್‌ಮನ್ ಈತ! ಟೆಸ್ಟ್ ಪಂದ್ಯಗಳಲ್ಲಿ ಎರಡು ಬಾರಿ ತ್ರಿಶತಕ ದಾಖಲಿಸಿದವರು ವಿಶ್ವದಲ್ಲಿ ಇರುವವರೇ ನಾಲ್ಕು ಜನ. ಅವರಲ್ಲಿ ಕ್ರಿಸ್ ಗೇಲ್ ಒಬ್ಬ. ವಿಶ್ವಕಪ್ ಮತ್ತು ಏಕದಿನ ಪಂದ್ಯಗಳಲ್ಲಿ ದ್ವಿಶತಕ ಹೊಡೆದ ಮೊದಲಿಗ ಕ್ರಿಸ್ ಗೇಲ್. ಟಿ20ಯಲ್ಲಿ ಎರಡು ಬಾರಿ ದ್ವಿಶತಕ ಹೊಡೆದ ಇಬ್ಬರು ಆಟಗಾರರಲ್ಲಿ ಒಬ್ಬ ಈ ಕ್ರಿಸ್... ಹೀಗೆ ದಾಖಲೆಗಳ ಪಟ್ಟಿ ಉದ್ದವಿದೆ.

ಟಿ20 ಜನಪ್ರಿಯವಾದ ಬಳಿಕ ಬಹಳಷ್ಟು ಆಟಗಾರರು ತಮ್ಮ ದೇಶವನ್ನೂ ಮೀರಿ ಬೆಳೆಯುತ್ತಿದ್ದಾರೆ! ಕ್ರಿಕೆಟ್ ಎಂಬುದು ಸಭ್ಯರ ಆಟ ಎಂದು ಇನ್ನೂ ನಂಬಿಕೊಂಡಿರುವ ಕಾಲದಲ್ಲಿ ಇಂತಹ ಆಟಗಾರರ ಸಂಖ್ಯೆ ಕಡಿಮೆಯಿದ್ದರೂ ಕಿರಿಕಿರಿ ತಪ್ಪಿದ್ದಲ್ಲ. ಕ್ರಿಸ್ ಗೇಲ್ ಅವರ ಸ್ಫೋಟಕ ಬ್ಯಾಟಿಂಗ್ ಶೈಲಿಗೆ ಎಷ್ಟೇ ಅಭಿಮಾನಿಗಳಿದ್ದರೂ ಅವರ ವೈಯಕ್ತಿಕ ನಡವಳಿಕೆಯ ಬಗ್ಗೆ ಒಳ್ಳೆಯ ಮಾತುಗಳಿಲ್ಲ ಎನ್ನುವುದು ಕಳವಳದ ಸಂಗತಿ. ಮುಖ್ಯವಾಗಿ ಹೆಣ್ಣುಮಕ್ಕಳ ಬಗ್ಗೆ ಲಘುವಾಗಿ ಮಾತನಾಡುವುದು ಸಾಕಷ್ಟು ಸಲ ಟೀಕೆಗೊಳಗಾದ ವಿಷಯ. ಸಂದರ್ಶಿಸಲು ಬಂದ ಪತ್ರಕರ್ತೆಯರ ಜತೆಗೆ ಅಶ್ಲೀಲವಾಗಿ ಮಾತನಾಡಿ ಎರಡು ಬಾರಿ ಗೇಲ್ ಟೀಕೆಗೊಳಗಾಗಿದ್ದಾರೆ. ಸಹ ಆಟಗಾರರ ಜತೆಗೆ ಜಗಳಕ್ಕಿಳಿದು ದಂಡ ಕಟ್ಟಿದ್ದಾರೆ. ವೆಸ್ಟಿಂಡೀಸ್ ತಂಡದ ನಾಯಕನಾಗಿ 2007ರಿಂದ 10ರವರೆಗೆ ತಂಡವನ್ನು ಮುನ್ನಡೆಸಿದರೂ, ಅಲ್ಲಿಯ ಕ್ರಿಕೆಟ್ ಮಂಡಳಿಯ ಜತೆಗೆ ಇವರ ಜಗಳ ಇನ್ನೂ ನಿಂತಿಲ್ಲ. ಸಿಕ್ಸರ್‌ಗಳು ಮತ್ತು ಹಣವೇ ಮುಖ್ಯವಾಗಿರುವ ಟಿ20 ಕ್ರಿಕೆಟ್‌ನಲ್ಲಿ ಆಟಗಾರರು ದೇಶಕ್ಕಿಂತ ಮುಖ್ಯ ಎಂದನ್ನಿಸಿಕೊಳ್ಳುವುದು ಸಹಜವೇ ಇರಬಹುದು.

ಅದೇನಿದ್ದರೂ ಟಿ20 ಗೆ ಕ್ರಿಸ್ ಗೇಲ್ ಸದ್ಯಕ್ಕಂತೂ ಅನಿವಾರ್ಯವೇ. ಪ್ರೇಕ್ಷಕರ ಮರ್ಜಿಯೇ ಮುಖ್ಯವಾಗಿರುವ ಚುಟುಕು ಕ್ರಿಕೆಟ್‌ನಲ್ಲಿ ಈತನನ್ನು ತಂಡದಿಂದ ಕೈಬಿಡುವುದು ಕಷ್ಟ. ಟಿ20 ಪಂದ್ಯಗಳಲ್ಲಿ ಈವರೆಗೆ ಕ್ರಿಸ್ ಗೇಲ್ ಹೊಡೆದಿರುವ ಒಟ್ಟು ಶತಕಗಳು 18. ಇದೂ ದಾಖಲೆಯೇ. ಈ ಸಾಧನೆಯಲ್ಲಿ ಎರಡನೇ ಸ್ಥಾನದಲ್ಲಿರುವ ಆಟಗಾರ ಹೊಡೆದಿರುವ ಶತಕಗಳು 7 ಎನ್ನುವುದನ್ನು ನೋಡಿದರೆ ಕ್ರಿಸ್ಟೋಫರ್ ಹೆನ್ರಿ ಕ್ರಿಸ್ ಗೇಲ್‌ನ ಮಹತ್ವ ಅರ್ಥವಾಗುತ್ತದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65